ಅವನೇ!... ಆತ ಇಲ್ಲಿ ಪ್ರಾಂಶುಪಾಲರ ಕುರ್ಚಿಯಲ್ಲಿ ಕುಳಿತಿದ್ದಾನೆ! ಖಂಡಿತವಾಗಿಯೂ ಅವನೇ!... ಏಕೆಂದರೆ ಅವನು ನಗುತ್ತಿದ್ದ... ಆತನ ಮುಖದಿಂದ ಅದೇ ಸಂತಸದ ಹೊನಲು ಹರ್ಷದ ಹೂಗಳು... ಆತನ ತುಟಿಯಿಂದ ಉದುರುತ್ತಿದ್ದವು. ಸದ್ಯ, ತಾನು ತಕ್ಷಣ ಹೊರಗೆ ಓಡಿಬಂದುಬಿಟ್ಟೆ. ಇಲ್ಲದೇ ಹೋಗಿದ್ದರೆ ನಾನು ಆ ಹೂಗಳನ್ನು ಹೆಕ್ಕಿ ಮಡಿಲಿಗೆ ಹಾಕಿಕೊಂಡು ಮನೆಗೆ ಬಂದಿದ್ದರೆ ಅಮ್ಮನಿಗೆ ಮುಖ ತೋರಿಸಲು ಸಾಧ್ಯವಾಗುತ್ತಿತ್ತೇ? ಸ್ವರ್ಗದ ಬಾಗಿಲು ಅಂದೇ ಮುಚ್ಚಿ ಬಿಡುತ್ತಿತ್ತು. ಶತಮಾನದ ನಿರೀಕ್ಷೆಯ ನಂತರ ಆ ರಾತ್ರಿ ನಾನು ಬಲವಂತವಾಗಿ ಕಣ್ಣು ಮುಚ್ಚಿ ನಿದ್ರಿಸಲು ಪ್ರಯತ್ನಿಸಿದೆ. ನಿಜವಾಗಿಯೂ ಆ ನನ್ನ ಕನಸಿನ ರಾಜಕುಮಾರನ ಜೊತೆ ಈ ವಾಸ್ತವದ ರಾಜಕುಮಾರನನ್ನು ಹೋಲಿಸಲು ಸಾಧ್ಯವಾಯಿತು.

ನೋಡಲು ಥೇಟ್ ಹಾಗೆಯೇ ಇದ್ದಾನೆ! ಅದೇ ಹೊಳೆಯುವ ಮುಖ, ಕಿರಣಗಳನ್ನು ಸೂಸುವ ಕಂಗಳು. ಮುಗುಳ್ನಗೆಯ ಅವೇ ಗುಲಾಬಿ ತುಟಿಗಳು... ಆದರೆ ಒಂದು ಅಂಶ ಮಾತ್ರ ಖಂಡಿತವಾಗಿಯೂ ಬೇರೆಯೇ. ಅದು ನಕ್ಷತ್ರಗಳ ಚಿನ್ನದ ಹೊಳಪಿನ ನವಿರು ನವಿರಾದ ಕೂದಲು. ಅದನ್ನು ಮುಟ್ಟುವ ಅದಮ್ಯ ಆಸೆ ಈಗಲೂ ಹಸುರಾಗಿಯೇ ಇದೆ. ಇದ್ದಕ್ಕಿದ್ದ ಹಾಗೆ ನನಗೆ ಶ್ರೀನಗರದ ಆ ಶ್ವೇತಹಿಮ ಹರಡಿದ ರಾತ್ರಿಯ ನೆನಪಾಯಿತು. ನಾನಾಗ ನೋಡುತ್ತೇನೆ... ನನ್ನ ರಾಜಕುಮಾರ ಮಂಜಿನ ಹೂಮಳೆಯಲ್ಲಿ ತೋಯುತ್ತಿದ್ದ. ಮತ್ತೆ ಇನ್ನೊಂದು ವಿಚಾರ ಇಲ್ಲಿ – ಈ ವಾಸ್ತವದ ರಾಜಕುಮಾರ ಮೋಡಿಮಾಡುವ ರೀತಿಯಲ್ಲಿ ಮಾತನ್ನು ಆಡುತ್ತಿದ್ದಾನೆ. ಮತ್ತೆ ಹೂ... ಬೇಡ... ಬೇಡ. ನಾನು ಚಕಿತಗೊಂಡು ಕಷ್ಟಪಟ್ಟು ಅವಶ್ಯಕತೆಗಿಂತಲೂ ಅಧಿಕ ಪ್ರಯತ್ನ ಮಾಡುತ್ತ ಮನದೊಳಗೇ ಮಂತ್ರ ಪಠಿಸಿದೆ. ಅನೇಕ ಸಲ ಪದೇ ಪದೇ!... ಆದರೆ ಕಣ್ಣು ಮುಚ್ಚಿದರೆ ಮತ್ತೆ ಹಾಜರು... ನಾನೇನು ಮಾಡಲಿ? ಅಮ್ಮನಿಗೆ ಫೋನ್ ಮಾಡೋಣವೆಂದರೆ ಅದಾಗಲೇ ರಾತ್ರಿಯ ಎರಡು ಗಂಟೆ. ಈ ಸರಿರಾತ್ರಿಯಲ್ಲಿ ಫೋನ್ ಮಾಡಿದರೆ ಅಮ್ಮ ಗಾಬರಿಗೊಳ್ಳದೇ ಇರಲಾರಳು. ನಾನೆಷ್ಟು ಮರೆಮಾಚಲು ಪ್ರಯತ್ನಿಸಿದರೂ ಆತ ಅದೇ ರೀತಿ ತನ್ನ ಹೊಳಪು ಕಂಗಳಿಂದ ನನ್ನನ್ನು ನೋಡುತ್ತಿದ್ದ. ಅವನ ಹೊಳೆಯುವ ಕೂದಲಿನ ಕಾಂತಿಯ ಮಸುಕಿನಲ್ಲಿ ಮುಂದಿನ ದಾರಿಯನ್ನು ಹುಡುಕುತಲಿದ್ದೆ. ಶಾಲೆಗೆ ಹೋಗುವಾಗ ನನಗರಿವಿಲ್ಲದಂತೆಯೇ ಕಿವಿಗಳಿಗೆ ಹಗುರವಾದ ಲೋಲಕ್ಕು ಧರಿಸಿ ತುಟುಗಳಿಗೆ ನೈಸರ್ಗಿಕ ಬಣ್ಣದ ಲಿಪ್‌ಸ್ಟಿಕ್ ಹಚ್ಚಿಕೊಂಡು ಹೋಗಲಾರಂಭಿಸಿದೆ. ಕೆಲವು ತಿಂಗಳುಗಳ ಹಿಂದೆ ಒಬ್ಬ ಸೇಲ್ಸ್‌ಗರ್ಲ್ ಬೇಡವೆಂದು ಪರಿಪರಿಯಾಗಿ ಹೇಳಿದ್ದರೂ ಸ್ಯಾಂಪಲ್ ಅಂತ ಹೇಳಿ ಇದೆಲ್ಲವನ್ನು ಕೊಟ್ಟು ಹೋಗಿದ್ದಳು. ಕನ್ನಡಿಯಲ್ಲಿ ಅದೆಷ್ಟು ಸಾರಿ ನೋಡಿಕೊಂಡೆನೋ!... ಮನಸ್ಸಿಗೆ ರೆಕ್ಕೆ ಬಂದಂತಾಗಿ ನಾನು ಗಾಳಿಯಲ್ಲಿ ತೇಲುತ್ತಿರುವ ಹಾಗೆ ಭಾಸವಾಗತೊಡಗಿತ್ತು. ಶಾಲೆಯಲ್ಲಿ ದಿನವಿಡೀ ಅವರನ್ನು ನೋಡದಿದ್ದರೆ ಏನೋ ಒಂದು ಥರದ ಅತೃಪ್ತಿ.

ಈಗ ಬೆಳಗ್ಗೆ!... ಇಂದು ಯಾವ ಬಟ್ಟೆ ಧರಿಸಲಿ ಎಂಬ ಯೋಚನೆ, ತಳಮಳ ಅನಿವಾರ್ಯವಾಗಿ ಕಾಡುತ್ತದೆ.

ಅವರೂ ಕೂಡ ನಿಜವಾದ ರಾಜಕುಮಾರ. ತನ್ನ ಆಫೀಸಿನಿಂದ ಹೊರಗೆ ಬರುವುದೇ ಇಲ್ಲ. ಏನಾದರೂ ಅಗತ್ಯ ಕೆಲಸವಿದ್ದರೆ ನನಗೆ ಕರೆ ಕಳುಹಿಸುತ್ತಾರೆ. ಅವರ ಮಾತಲ್ಲಿ ಹೂಮಳೆ ಸುರಿಯುತ್ತದೆ. ನಾನು

